ಬರತಕ್ಕದ್ದು ಸಹಜ ಇದೆ. ಆ ಪ್ರಕಾರ ಹೇಳುವುದಾದರೆ ಗುಲ್ಬರ್ಗಾ ತಾಲ್ಲೂಕಿನಲ್ಲಿ ೧ ಲಕ್ಷ ೪೩ ಸಾವಿರ ರೂಪಾಯಿ ಖರ್ಚು ಆಗಿದ್ರೆ ಆಳಂದದಲ್ಲಿ ೧೧೪ ಸಾವಿರ ರೂಪಾಯಿ, ಸುರಪುರದಲ್ಲಿ ಎರಡೂವರೆ ಸಾವಿರ ರೂಪಾಯಿ, ಯಾದ್ಗಿರ್‌ನಲ್ಲಿ ೩ ಸಾವಿರ ರೂಪಾಯಿ ಸಿದ್ದಾಪುರದಲ್ಲಿ ಒಂದೂವರೆ ಸಾವಿರ ರೂಪಾಯಿ, ಶಹಾಪುರದಲ್ಲಿ ೭ ಸಾವಿರ ರೂಪಾಯಿ ಖರ್ಚು ಆಗಿದೆ. ಇಲ್ಲಿ ಪ್ರಾದೇಶಿಕವಾಗಿ ಅಸಮಾನತೆ ಇರುತ್ತದೆ, ಪ್ರತಿ ತಾಲ್ಲೂಕಿನಲ್ಲಿಯೂ ಕಾರ್ಯಕ್ರಮಗಳನ್ನು ಏರ್ಪಾಟು ಮಾಡಿ ಆ ಬಗ್ಗೆ ಅರ್ಜಿಯನ್ನು ಕೊಟ್ಟಲ್ಲಿ ಸಂಪೂರ್ಣವಾಗಿ ಸಂಸ್ಕೃತಿ ಇಲಾಖೆಯಿಂದ ಹಣದ ಸಹಾಯವನ್ನು ಮಾಡಿಸಿಕೊಡುವುದಕ್ಕೆ ತಯಾರು ಇದ್ದೇನೆ.

ಶ್ರೀ ಎಂ. ವೀರಯ್ಯಸ್ವಾಮಿ.—ಪ್ರತಿ ತಾಲ್ಲೂಕಿಗೆ ಇಷ್ಟು ಹಣ ಖರ್ಚು ಮಾಡಬೇಕು ಎಂದು ಏನು ಇದೆ. ಆ ಪ್ರಕಾರ ಏಕೆ ಖರ್ಚು ಮಾಡಿಲ್ಲ ?

ಶ್ರೀ ಎಂ.ಪಿ. ಪ್ರಕಾಶ್ —ಪ್ರತೀ ತಾಲ್ಲೂಕಿಗೆ ಇಷ್ಟು ಖರ್ಚು ಎಂದು ಇಲ್ಲ. ಸಂಸ್ಕೃತಿ ಪ್ರಸಾರ ಕ್ಕಾಗಿ ಸಪ್ತಾರು ೧೦ ಸಾವಿರ ರೂಪಾಯಿ ಒಂದು ಜಿಲ್ಲೆಗೆ, ವಿಭಾಗೀಯ ಕೇಂದ್ರದಲ್ಲಿ ೨೫ ಸಾವಿರ ರೂಪಾಯಿ ಕೊಡುವ ವ್ಯವಸ್ಥೆ ಇದೆ. ಅದರಲ್ಲಿ ಅವರು ಏನಾದರೂ ಪ್ರತ್ಯೇಕವಾಗಿ ಇರತಕ್ಕ ಕಾರ್ಯ ಕ್ರಮಗಳನ್ನು ಆಕಸ್ಮಾತ್ ಮಾಡಿದರೆ, ಉದಾಹರಣಾರ್ಥವಾಗಿ ಹೇಳುವುದಾದರೆ, ಬೀದರ್‌ನಲ್ಲಿ ಸಂಗೀತೋತ್ಸವ ಕಾರ್ಯಕ್ರಮ ಆಗುತ್ತಿದೆ. ಈ ರೀತಿಯ ವಿಶೇಷ ಸಂದರ್ಭದಲ್ಲೂ ಕೂಡಾ ಹಣ ಖರ್ಚು ಮಾಡುತ್ತಿದ್ದೇವೆ. ನಿಮ್ಮ ತಾಲ್ಲೂಕಿನಲ್ಲಿ ಆಕಸ್ಮಾತ್ ಇಂತಹ ವಿಶೇಷ ಕಾರ್ಯಕ್ರಮ, ರಂಗ ತರವೇತಿ ಕಾರ್ಯಗಾರ ಅಥವಾ ಎಂತಹದೇ ಆಗಿರತಕ್ಕ ನಾಟಕ ಪ್ರದರ್ಶನ- ಬಗ್ಗೆ ಅರ್ಜಿ ಕೊಟ್ಟರೆ ಸಂಪೂರ್ಣವಾದ ಸಹಕಾರವನ್ನು ಕೊಡುತ್ತೇವೆ. ನಾನು ಕೊಟ್ಟಿರುವ ಉತ್ತರದಲ್ಲಿ ನಾಟಕ ಅಕೆಡಮಿ, ಸಂಗೀತ ಸಾಹಿತ್ಯ ಅಕೆಡಮಿ, ಉರ್ದು ಅಕೆಡಮಿ, ಕಲಾ ಅಕೆಡಮಿಗಳಿಂದ ಖರ್ಚು ಮಾಡಿರತಕ್ಕ ವಿವರ ಇಲ್ಲ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೇರವಾಗಿ ಮಾಡಿರುವುದು ಮಾತ್ರ ಇದರಲ್ಲಿ ಕೊಟ್ಟಿದ್ದೇನೆ.

ಶ್ರೀ ಎಂ.ಎಂ. ಖಾರ್ಗೆ.—ಎಲ್ಲಾ ಜಿಲ್ಲೆಯಲ್ಲೂ ಕಲಾಭವನ ಕಟ್ಟಿಸಿದ್ದು ಗುಲ್ಬರ್ಗಾದಲ್ಲಿ ಏಕೆ ಕಟ್ಟಿಸಿಲ್ಲ ? ನನಗೆ ತಿಳಿದ ಹಾಗೆ ೪೦ ಲಕ್ಷ ಎಸ್ಟಿಮೇಟ್ ಮಾಡಿ ಇಲ್ಲಿ ಒಂದು ಕಲಾಭವನ ಕಟ್ಟಿಸಬೇಕೆಂದು ಸರ್ಕಾರ ನಿರ್ಣಯ ತೆಗೆದುಕೊಂಡಿತ್ತು. ಈಗಲಾದರೂ ಕನಿಷ್ಟಪಕ್ಷ ಪ್ರಯತ್ನ ಮಾಡತಕ್ಕ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ ಪಿ. ಪ್ರಕಾಶ್.—೧೯೮೨-೮೩ನೇ ಸಾಲಿನಲ್ಲಿ ಮೈಸೂರಿನಲ್ಲಿ ವಿಶ್ವ ಕನ್ನಡ ಸಮ್ಮೇಳನ ಮಾಡತಕ್ಕ ಸಂದರ್ಭದಲ್ಲಿ ಎಲ್ಲಾ ಜಿಲ್ಲೆಗೆ ಒಂದೊಂದು ರಂಗಮಂದಿರ ಕಟ್ಟಬೇಕೆಂದು ಯೋಜನೆ ರೂಪಿಸಿದ್ದೆವು. ರೂಪನೆ ಮಾಡತಕ್ಕ ಸಂದರ್ಭದಲ್ಲಿ ಕೇವಲ ೧೨ ಜಿಲ್ಲೆಗಳಲ್ಲಿ ಮಾತ್ರ ಈ ಕಾರ್ಯ ಕ್ರಮಗಳನ್ನು ಪ್ರಾರಂಭ ಮಾಡಿದೆವು ಬೇರೆ ಜಿಲ್ಲೆಗಳಲ್ಲಿ ಕಾರ್ಯಕ್ರಮ ಪ್ರಾರಂಭ ಮಾಡಿಲ್ಲ. ಗುಲ್ಬರ್ಗಾದಲ್ಲಿ ಕೂಡಾ ಈ ವಿಚಾರದಲ್ಲಿ ಪ್ರಯತ್ನ ಮಾಡುವುದಕ್ಕೆ ನಿವೇಶನ ಕೊಡತಕ್ಕ ವಿಚಾರದಲ್ಲಿ ಸ್ವಲ್ಪ ಭಿನ್ನಾಭಿಪ್ರಾಯ ಬಂದುದರಿಂದ ಪ್ರಯತ್ನ ನಿಂತಿತು. ಆಲ್ಲಿರತಕ್ಕ ಸಾರ್ವಜನಿಕ ಉದ್ಯಾನವನ ದಲ್ಲಿ ರಂಗಮಂದಿರ ಕಟ್ಟಬೇಕೆಂದು ಒಂದೆಳ ಜನರ ಒತ್ತಾಯ ಇದ್ದು ಮತ್ತು ಅಲ್ಲಿಯ ನಗರಸಭೆ ಯಂವರು ಅದಕ್ಕೆ ಒಪ್ಪಿಗೆ ಕೊಡಲಿಲ್ಲ ಏನ್ನುವ ಪ್ರಶ್ನೆ ಬಂದಿದೆ. ಈ ಕಾರಣದಿಂದ ಅದು ನಿಂತಿದೆ. ಈಗಲಾದರೂ ಕೂಡಾ ಒಳ್ಳೆಯ ನಿವೇಶನವನ್ನು ಕೊಡತಕ್ಕದ್ದಾದರೆ ಗುಲ್ಬರ್ಗದಲ್ಲಿ ರಂಗಮಂದಿರವನ್ನು ಇದೇ ವರ್ಷದಲ್ಲಿ ಕೊಡುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ.

ಶ್ರೀ ಎಂ.ಎಂ. ಖಾರ್ಗೆ.—ಜಾಗ ಕೊಟ್ಟರೆ ಮಾಡುತ್ತೀರಾ ?

ಶ್ರೀ ಎಂ.ಪಿ. ಪ್ರಕಾಶ್.—ನಿವೇಶನ ಕೊಡಿ, ಮಾಡಂತ್ತೇವೆ.

ರಾಜ್ಯದಲ್ಲಿ ೧೦೦ ಬಾವಿಗಳ ಯೋಜನೆ

೧೭೩೩. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ):—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೭-೮೮ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ ನೂರು ಬಾವಿ ಯೋಜನೆಯು ಆಡಿಯಲ್ಲಿ ಆಗಿರುವ ಪ್ರಗತಿಯೇನು ? (ಬೇರೆ ಬೇರೆ ಜಿಲ್ಲಾವಾರು) ಜಿಲ್ಲಾವಾರು ಮಂಜೂರಾಗಿ ಕೆಲಸ ಪ್ರಾರಂಭ ವಾಗಿರುವ ಒಟ್ಟು ಸಂಖ್ಯೆಯ ವಿವರಗಳನ್ನು ನೀಡುವುದು.

ಆ) ಶಿವಮೊಗ್ಗ ಜಿಲ್ಲೆಯಲ್ಲಿ ೧೯೮೭–೮೮ನೇ ಸಾಲಿನಲ್ಲಿ ಪ್ರತಿ ತಾಲ್ಲೂಕಿನಲ್ಲಿ ಮಂಜೂರಾಗಿರುವ ಪ್ರಯೋಜನದಾರರ ಸಂಖ್ಯೆ ಎಷ್ಟು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಆ) ನೂರು ಬಾವಿ ಯೋಜನೆ ಅಡಿಯಲ್ಲಿ ಸನ್ ೧೯೮೭–೮೮ನೇ ಸಾಲಿನಲ್ಲಿ ಆದ ಪ್ರಗತಿ (ಜಿಲ್ಲಾವಾರು) ಕೆಳಗಿನಂತಿವೆ :

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಪೂರ್ಣಗೊಂಡ ಸಣ್ಣ ನೀರಾವರಿ ಕೆಲಸಗಳು (ಸಣ್ಣ ನೀರಾವರಿ ಕೆಲಸಗಳು)	ಪೂರ್ಣಗೊಂಡ ಪ್ರಯೋಜನ (ಹೆಕ್ಟೇರುಗಳಲ್ಲಿ)	ಮಂಜೂರಾಗಿ ಕೆಲಸ ಪ್ರಾರಂಭವಾಗಿರುವ ಸಣ್ಣ ನೀರಾವರಿ ಕೆಲಸಗಳ ವಿವರಗಳು
೧	೨	೩	೪	೫
೧	ಬೆಂಗಳೂರು (ನಗರ)	೨೦೨	೬.೫೦೦	೧೬೪
೨	ಬೆಂಗಳೂರು (ಗ್ರಾಮಾಂತರ)	೫೩೪	೨೩.೦೫೦	೬೬೧
೩	ಬೆಳಗಾಂ	೫೦೨	೩೭.೧೫೦	೮೮೭
೪	ಬಳ್ಳಾರಿ	೭೦	೯.೨೭೦	೨೨೫
೫	ಬೀದರ್	೪೭೮	೧೧.೨೪೨	೬೫೦
೬	ಬಿಜಾಪುರ	೫೮೨	೧೪.೬೮೦	೧೦೪೮
೭	ಚಿಕ್ಕಮಗಳೂರು	೨೧೩	೮.೫೨೧	೩೧೭
೮	ಚಿತ್ರದುರ್ಗ	೪೯೭	೨೩.೫೦೫	೨೭೮
೯	ದಕ್ಷಿಣ ಕನ್ನಡ	೫೩೮	೧೬.೫೦೪	೧೦೪೧
೧೦	ಧಾರವಾಡ	೧೧೧೮	೬೪.೧೨೬	೧೧೧೮
೧೧	ಗುಲ್ಬರ್ಗ	೭೭೧	೧೮.೯೫೦	೭೯೨
೧೨	ಹಾಸನ	೫೯೮	೩೫.೨೮೦	೫೯೮
೧೩	ಕೊಡಗು	೪೧೪	೧೧.೫೬೫	೪೧೪
೧೪	ಕೋಲಾರ	೧೬೨	೧೧.೭೪೬	೩೧೦
೧೫	ಮಂಡ್ಯ	೪೫೪	೯.೨೨೦	೩೬೦
೧೬	ಮೈಸೂರು	೫೭೦	೨೭.೫೦೯	೫೭೦
೧೭	ರಾಯಚೂರು	೫೩೭	೧೪.೬೬೭	೮೧೯
೧೮	ಶಿವಮೊಗ್ಗ	೨೫೪	೧೪.೨೩೦	೬೬೬
೧೯	ತುಮಕೂರು	೯೮೩	೨೧.೪೫೦	೬೯೮
೨೦	ಉತ್ತರ ಕನ್ನಡ	೫೭೮	೨೧.೬೧೦	೧೮೦೩
	ಒಟ್ಟು	೧೦೦೯೭	೪೭೭೬	೧೨೬೧೯

ಆ) ಶಿವಮೊಗ್ಗ ಜಿಲ್ಲೆಯಲ್ಲಿ ಮಂಜೂರಾಗಿರುವ ಪ್ರಯೋಜನದಾರರ ವಿವರ (ತಾಲ್ಲೂಕು ವಾರು).—

ತಾಲ್ಲೂಕು ಹೆಸರು	ಮಂಜೂರಾದ ಪ್ರಯೋಜನದಾರರ ಸಂಖ್ಯೆ
ಶಿವಮೊಗ್ಗ	೬೨
ಭದ್ರಾವತಿ	೧೦
ಚನ್ನಗಿರಿ	೫೧
ಹೊನ್ನಾಳಿ	೧೮೭
ಶಿಕಾರಿಪುರ	೧೨೦
ಸೊರಬ	೨೦೫
ಸಾಗರ	೯
ಹೊಸನಗರ	೧೭
ತೀರ್ಥಹಳ್ಳಿ	೫
ಒಟ್ಟು	೬೬೬

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಇದು ರೈತರಿಗೆ ಸಂಬಂಧಪಟ್ಟ ಬಹಳ ಪ್ರಾಮುಖ್ಯವಾದ ಪ್ರಶ್ನೆ. ನನಗೆ ತಾವು ೧೯೮೭-೮೮ನೇ ಸಾಲಿನಲ್ಲಿ ತಾವು ಕೊಟ್ಟಿರತಕ್ಕ ಬೇರೆ ಬೇರೆ ಜಿಲ್ಲೆಯಲ್ಲಿ ಮಂಜೂರಾದ ಕೆಲಸ ಒಟ್ಟು ೧೨೬೬ ಎಂದು ಹೇಳಿದ್ದೀರಿ. ಶಿವಮೊಗ್ಗ ಜಿಲ್ಲೆಯಲ್ಲಿ ೧೯೮೭-೮೮ನೇ ಸಾಲಿನಲ್ಲಿ ತಾಲ್ಲೂಕುವಾರು ಮಂಜೂರಾದ ಬಾವಿಗಳ ಸಂಖ್ಯೆ ೬೬೬ ಎಂದು ಹೇಳಿದ್ದೀರಿ. ಶಿವಮೊಗ್ಗ ಜಿಲ್ಲೆಯಲ್ಲಿ ೬೬೬ ಕೆಲಸಗಳು ಪ್ರಾರಂಭವಾಗಿದೆಯೆ ? ಎರಡನೇ ಕಾಲಂ ಮತ್ತು ನಾಲ್ಕನೇ ಕಾಲಂನಲ್ಲಿರುವಂತಹ ಅಂಕಿಸಂಖ್ಯೆಗಳ ವ್ಯತ್ಯಾಸ ಏನಿದೆ ಅದರ ಅರ್ಥ ಏನೆಂಬುದನ್ನು ನನಗೆ ಸ್ಪಷ್ಟವಾಗಿ ಹೇಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ವಿಶಾಲವಾಗಿ ಒಂದು ಮಾತು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಹಿಂದಿನ ವರ್ಷ ಬಾಕಿ ಇದ್ದ ಅಂದರೆ ೧೯೮೬-೮೭ನೇ ಸಾಲಿನಲ್ಲಿ ಬಾಕಿಯಿದ್ದ ಕೆಲಸವನ್ನು ಸೇರಿಸಿ ಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನೂರು ಬಾವಿಗಳನ್ನು ಕೊಡತಕ್ಕ ಕಾರ್ಯಕ್ರಮ ಏನಿದೆ ಅದರಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ೫ ಎಕರೆಗಿಂತ ಕಡಿಮೆ ಭೂಮಿ ಇರತಕ್ಕವರಿಗೆ ಅನುಕೂಲ ಎನ್ನುವ ದೃಷ್ಟಿಯಿಂದ ಈ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ. ನಾನು ಶಿವಮೊಗ್ಗ ಜಿಲ್ಲೆಯ ಅಂಕಿಅಂಶಗಳನ್ನು ಕೇಳಿದ ಉದ್ದೇಶ ಒಂದೇ ಒಂದು. ಶಿವಮೊಗ್ಗ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಕೊಟ್ಟಿರುವ ಅಂಕಿಅಂಶಗಳ ಪ್ರಕಾರ ೧೯೮೬-೮೭ನೇ ಸಾಲಿನಲ್ಲಿ ೬೬೬ ಬಾವಿಗಳು ಮಂಜೂರು ಆಗಿವೆ. ಅದರಲ್ಲಿ ಎಷ್ಟು ಕೆಲಸ ಪ್ರಾರಂಭವಾಗಿದೆ ಎನ್ನುವುದನ್ನು ಹೇಳುವುದಾದರೆ ಕೊನೆಯ ಕಾಲಂನ ಅಂಕಿ ಸಂಖ್ಯೆ ಸರಿ ಇದೆಯೇ ಇಲ್ಲವೇ ಎಂಬುದೂ ಗೊತ್ತಾಗುತ್ತದೆ. ಸರಿಯಿಲ್ಲದಿದ್ದರೆ ಈ ಯೋಜನೆ ಪ್ರಾರಂಭವಾದ ಮೇಲೆ ಇದುವರೆಗೆ ೧೨೬೬, ೧೯೮೭-೮೮ನೇ ಸಾಲಿನಲ್ಲಿ ಪ್ರಗತಿಯಲ್ಲಿದೆ ಎಂದಾಗುತ್ತದೆ, ಯಾವ್ಯಾವ ಜಿಲ್ಲೆಯ ಅಂಕಿಅಂಶಗಳನ್ನು ಕೇಳಿದರೂ ಅಂಕಿಅಂಶಗಳಲ್ಲಿ ತಾರತಮ್ಯವಿಲ್ಲ. ದಯವಿಟ್ಟು ನನಗೆ ಅರ್ಥವಾಗುವ ಹಾಗೆ ಹೇಳಿದರೆ ಒಳ್ಳೆಯದು.

ಶ್ರೀ ಎ. ಲಕ್ಷ್ಮೀಸಾಗರ್.—೧೯೮೭-೮೮ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ೨೫೫ ಕೆಲಸಗಳು ಪೂರ್ಣವಾಗಿವೆ. ಅದು ಅಲ್ಲದೆ ೪೧೨ ಕೆಲಸಗಳನ್ನು ಟರ್ನ್ ಕೀ ಆಧಾರದ ಮೇಲೆ ಕೆ.ಐ.ಸಿ. ನವರಿಗೆ ವಹಿಸಲಾಗಿದೆ. ೧೯೮೭-೮೮ನೇ ಸಾಲಿನಲ್ಲಿ ೧೮೨.೨೩ ಲಕ್ಷ ರೂಪಾಯಿಗಳನ್ನು ಈ ಯೋಜನೆಗಾಗಿ ವಿಚರ್ಚು ಮಾಡಲಾಗಿದೆ ೧೯೮೮-೮೯ನೇ ಸಾಲಿನಲ್ಲಿ ೧೦೦ ಬಾವಿಗಳ ಯೋಜನೆಗಳ ಅಡಿಯಲ್ಲಿ ೪೦೪ ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ವಿಂಗಡಿಸಲಾಗಿಟ್ಟಿದ್ದೇವೆ.

ಶ್ರೀ ಬಿ.ಎಸ್, ಯಡಿಯೂರಪ್ಪ.–ತಾವು ಆಂಕಿ ಅಂಶಗಳನ್ನು ಕೊಡುವ ಸಂದರ್ಭದಲ್ಲಿ ಭದ್ರಾವತಿ ತಾಲ್ಲೂಕಿಗೆ ಸಾಗರ ತಾಲ್ಲೂಕಿಗೆ ೯ ಹಾಗೂ ತೀರ್ಥಹಳ್ಳಿ ತಾಲ್ಲೂಕಿಗೆ ೫ ಎಂದು ಹೇಳಿದ್ದೀರಿ. ಶಿಕಾರಿಪುರ ತಾಲ್ಲೂಕಿಗೆ ೧೨೦ ಎಂದು ಹೇಳಿದ್ದೀರಿ. ನಾನು ತಾಲ್ಲೂಕು ಪಂಚಾಯತಿ ಕಮಿಟಿ ಅಧ್ಯಕ್ಷನಾಗುವುದರಿಂದ ಮೇ ತಿಂಗಳಿನಲ್ಲಿ ರಿವ್ಯೂ ಮಾಡುವ ಸಂದರ್ಭದಲ್ಲಿ ಶಿಕಾರಿಪುರ ತಾಲ್ಲೂಕಿಗೆ ೧೨೦ ಬಾವಿಗಳು ಮಂಜೂರಾಗಿದ್ದರೂ ಸಹ ಬಡವರಿಗೆ ಅನುಕೂಲವಾಗಿರುವುದು ಕೇವಲ ೧೩ ಬಾವಿಗಳ ಕೆಲಸ ಪ್ರಾರಂಭವಾಗಿದೆ, ಉಳಿದವರಿಗೆ ಆಗಿಲ್ಲ. ಆದುದರಿಂದ ಕೊನೆಯ ಕಾಲಂ ನಲ್ಲಿ ೧೨,೬೧೯ ಪ್ರಗತಿಯಲ್ಲಿವೆ ಅಂದರೆ ಇದು ಹೇಗೆ ? ಇನ್ನುಳಿದ ತಾಲ್ಲೂಕುಗಳಾದ ತೀರ್ಥಹಳ್ಳಿ ಮತ್ತಿತರ ಕಡೆಗಳಲ್ಲಿ ಬಾವಿಗಳ ಸಂಖ್ಯೆ ಕಡಿಮೆ ಯಾಗುವುದಕ್ಕೆ ಏನು ಕಾರಣ ? ಅಲ್ಲಿಯ ಜನರಿಗೆ ಏನಾ ಸಮಸ್ಯೆಯಿದೆ ? ಜನರು ಮುಂದೆ ಬರಲಿಲ್ಲವೇ ?

ಶ್ರೀ ಎ. ಲಕ್ಷ್ಮೀಸಾಗರ್.—ಶಿವಮೊಗ್ಗ ಜಿಲ್ಲೆಗೆ ಮಂಜೂರಾದದ್ದು ೬೬೬. ಅವುಗಳಲ್ಲಿ ಮುಗಿದದ್ದು ೨೫೪. ಎಲ್ಲಿ ಕಡಿಮೆ ಬಂದಿದೆಯೆಂದು ಹೇಳಿದರೆ ಅಲ್ಲಿ ಜಾಸ್ತಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಕೆಲಸ ಪ್ರಾರಂಭವಾಗದೆ ಇರುವ ಕಡೆಗಳಲ್ಲಿ ಕೆಲಸ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನನಗೆ ಸ್ಪಷ್ಟವಾದ ಉತ್ತರ ಬೇಕು. ೧೯೮೬–೮೮ನೇ ಸಾಲಿನಲ್ಲಿ ರಾಜ್ಯದಲ್ಲಿ ಬೇರೆ ಬೇರೆ ಜಿಲ್ಲೆಗಳಲ್ಲಿ ಎಷ್ಟು ಬಾವಿಗಳು ಮಂಜೂರು ಆಗಿದೆ. ಎಷ್ಟು ಕೆಲಸ ಪ್ರಾರಂಭವಾಗಿವೆಯೆಂದು ಹೇಳಿದರೆ ನನಗೆ ಅಷ್ಟೆ ಸಾಕು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಮಂಜೂರಾದದ್ದು ಎಷ್ಟು, ಎಷ್ಟು ಕೆಲಸ ಪ್ರಾರಂಭವಾಗಿದೆ ಎಂಬುದನ್ನು ಕೇಳಿದ್ದಾರೆ ಆ ವಿವರಗಳನ್ನು ತರಿಸಿಕೊಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ —೧೨,೬೧೯ ಪ್ರಗತಿಯಲ್ಲಿವೆ ಎಂದು ಹೇಳಿದ್ದೀರಿ. ಎರಡನೆ? ಕಾಲಂನ ನಾಲ್ಕನೇ ಕಾಲಂ ಬಗ್ಗೆ ವಿವರವಾಗಿ ಹೇಳಿ ಅಂಕಿಸಂಖ್ಯೆಗಳು ವ್ಯತ್ಯಾಸ ಆಗಲಿಕ್ಕೆ ಕಾರಣವೇನು ?

ಶ್ರೀ ಎ. ಲಕ್ಷ್ಮೀಸಾಗರ್.—ನೀವು ವಿವರವಾಗಿ ಕೇಳಲಿಲ್ಲ, ನಾನು ಹೇಳಲಿಲ್ಲ, ಈಗ ಹೇಳುತ್ತೇನೆ. ಆದರೆ ಮೇಲೆ ಚರ್ಚೆ ಬೇಡ. ಎಲ್ಲಾ ವಿವರವನ್ನು ಸೇರಿಸಿ ಉತ್ತರ ಕೊಡುತ್ತೇನೆ.

ಗುಲ್ಬರ್ಗಾ ಜಿಲ್ಲಾ ಪರಿಷತ್ತಿಗೆ ಬಿಡುಗಡೆಯಾದ ಹಣ

೧೮೩೧ ಶ್ರೀ ಎಂ. ವಾಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್, ವಕ್ಫ್ ಹಾಗೂ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಲ್ಬರ್ಗಾ ಜಿಲ್ಲಾ ಪರಿಷತ್ತಿಗೆ ಸರ್ಕಾರದಿಂದ ವಿವಿಧ ಇಲಾಖೆಗಳ ಹೆಸರಿನಲ್ಲಿ ೧೯೮೬–೮೮ನೇ ಸಾಲಿಗೆ ಬಿಡುಗಡೆಯಾದ ಹಣವೆಷ್ಟು ಮತ್ತು ವಿವಿಧ ಇಲಾಖೆಗಳಲ್ಲಿ ಇಲ್ಲಿಯವರೆಗೆ ಖರ್ಚಾದ ಹಣವೆಷ್ಟು ?

ಆ) ಗುಲ್ಬರ್ಗಾ ಜಿಲ್ಲಾ ಪರಿಷತ್ತಿನಲ್ಲಿ ಬಿಡುಗಡೆಯಾದ ಹಣದಲ್ಲಿ ಉಳಿತಾಯವಾದ ಹಣವೆಷ್ಟು?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು).—

ಅ) ವಿವರಣೆಯನ್ನು ಲಗತ್ತಿಸಿದೆ.

ಆ) ವಿವರಣೆಯನ್ನು ಲಗತ್ತಿಸಿದೆ.